# ಮಾದರಿ ಪ್ರಶ್ನೆಪತ್ರಿಕೆ-01

**ಸಮಯ: 3 ಗಂಟೆಗಳು** **10ನೇ ತರಗತಿ- ಸಮಾಜ ವಿಜ್ಞಾನ** **ಗರಿಷ್ಠ ಅಂಕಗಳು:80**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರ ಬರೆಯಿರಿ.** **8x1=8**

**1.** ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ಹಮ್ಮಿಕೊಂಡಿರುವ ಕಾರ್ಯಕ್ರಮ

A) ಬಾಲಶ್ರಮ ನಿರ್ಮೂಲನೆ B) ವರದಕ್ಷಿಣೆ C) ಲಿಂಗ ತಾರತಮ್ಯ D) ಕೂಲಿಯಿಂದ ಶಾಲೆಗೆ

**2.** ಭಾರತದ ದೇಶೀಯ ಸಂಸ್ಥಾನಗಳ ವಿಲೀನೀಕರಣ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದವರು

A) ಜವಾಹರಲಾಲ್ ನೆಹರೂ B) ಸರ್ದಾರ್ ವಲ್ಲಭಭಾಯ್ ಪಟೇಲ್

C) ಮಹಾತ್ಮ ಗಾಂಧೀಜಿ D) ಬಾಲಗಂಗಾಧರ ತಿಲಕ್

**3.** ಭಾರತದ ಅಭ್ರಕದ ರಫ್ತು ಕಡಿಮೆಯಾಗಿದೆ. ಏಕೆಂದರೆ

A) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ. B) ಅಭ್ರಕದ ಉತ್ಪಾದನೆ ಕಡಿಮೆಯಾಗಿದೆ.

C) ಅಭ್ರಕದ ನಿಕ್ಷೇಪ ಬರಿದಾಗಿದೆ. D) ಅಭ್ರಕವು ಉತ್ತಮ ಖನಿಜವಾಗಿಲ್ಲ.

**4.** ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ ಜಾರಿಗೆ ಬಂದ ವರ್ಷ

A) 1992 B) 1993 C) 1994 D) 2004

**5.** ನಾವು ಯುನಿಸೆಫನ ಶುಭಾಶಯ ಪತ್ರಗಳನ್ನು ಕೊಳ್ಳಬೇಕು. ಏಕೆಂದರೆ ಇದರಿಂದ ಗಳಿಸಿದ ಹಣವನ್ನು

A) ಮಕ್ಕಳ ಯೋಗಕ್ಷೇಮಕ್ಕಾಗಿ ವಿನಿಯೋಗಿಸುತ್ತಿದೆ. B) ರಸ್ತೆ ನಿರ್ಮಾಣಕ್ಕೆ ವಿನಿಯೋಗಿಸುತ್ತಿದೆ.

C) ಕೃಷಿ ಅಭಿವೃದ್ಧಿಗೆ ವಿನಿಯೋಗಿಸುತ್ತಿದೆ. D) ಕಾರ್ಮಿಕರ ಕ್ಷೇಮಕ್ಕಾಗಿ ವಿನಿಯೋಗಿಸುತ್ತಿದೆ.

**6.** ಎರಡನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಮುಖ್ಯ ಕಾರಣ

A) ತಿರುವಾಂಕೂರು ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆ B) ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು

C) ಆರ್ಕಾಟಿನ ಮೇಲೆ ಬ್ರಿಟಿಷರ ಆಕ್ರಮಣ D) ಟಿಪ್ಪು ಸಹಾಯಕ ಸೈನ್ಯ ಪದ್ಧತಿಯನ್ನು ನಿರಾಕರಿಸಿದ್ದು

**7.** "ಭಾರತದ ಹಸಿರು ಕ್ರಾಂತಿಯ ಪಿತಾಮಹ"

A) ಡಾ.ಎಂ.ಎಸ್.ಸ್ವಾಮಿನಾಥನ್ B) ಜವಾಹರ್ ಲಾಲ್ ನೆಹರು

C) ವರ್ಗಿಸ್ ಕುರಿಯನ್ D) ಸರ್. ಎಂ.ವಿಶ್ವೇಶ್ವರಯ್ಯ

**8.** ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಸ್ಥಾಪನೆ ಮತ್ತು ಅವುಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರೀಕರಿಸಲು ಸ್ಥಾಪಿಸಿರುವ ಸಂಸ್ಥೆ

A) ಜಿಲ್ಲಾ ಕೈಗಾರಿಕಾ ಕೇಂದ್ರಗಳು B) ಕೈಗಾರಿಕಾ ಪ್ರದೇಶಗಳು C) ತಾಂತ್ರಿಕ ಸಂಸ್ಥೆಗಳು D) ಕೈಗಾರಿಕಾ ಬ್ಯಾಂಕು

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

**9.** 'ಗೊಬೆಲ್ಸ್' ಎಂದರೆ ಯಾರು?

**10.**ಕೈಗಾ ವಿರೋಧಿ ಚಳವಳಿ ನಡೆಯಲು ಕಾರಣವೇನು?

**11.**ಸರ್ದಾರ್ ವಲ್ಲಭಭಾಯಿ ಪಟೇಲರನ್ನು "ಭಾರತದ ಉಕ್ಕಿನ ಮನುಷ್ಯ" ಎಂದು ಕರೆಯಲಾಗಿದೆ. ಏಕೆ?

**12.**ಡಿಸೆಂಬರ್ 10 ಮಾನವ ಹಕ್ಕುಗಳ ರಕ್ಷಣೆಯ ಇತಿಹಾಸದಲ್ಲಿ ಪ್ರಮುಖ ಐತಿಹಾಸಿಕ ಮೈಲಿಗಲ್ಲಾಗಿದೆ.ಏಕೆ?

**13.** ಮೆಕ್ಕಲು ಮಣ್ಣು ಹೇಗೆ ಉತ್ಪತ್ತಿಯಾಗುತ್ತದೆ?

**14.** 'ಮಾವಿನ ಹೊಯ್ಲು' ಎಂದರೇನು?

**15.**ಆಯ-ವ್ಯಯ ಎಂದರೇನು?

**16.**ಪ್ರಸ್ತುತ ದಿನಗಳಲ್ಲಿ ಗ್ರಾಹಕರ ರಕ್ಷಣೆ ಏಕೆ ಅಗತ್ಯವಾಗಿದೆ?

**III. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8X2=16**

**17.**ಪ್ಲಾಸಿ ಕದನದ ಪರಿಣಾಮಗಳನ್ನು ತಿಳಿಸಿ?

**18.**ರಸ್ತೆ ಸಾರಿಗೆಯು ಅನೇಕ ತೊಡಕುಗಳನ್ನು ಎದುರಿಸುತ್ತಿದೆ. ಪುಷ್ಠೀಕರಿಸಿ.

**19.**ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗಿನ ಭಾರತದ ಬಾಂಧವ್ಯ ಹದಗೆಟ್ಟಿದೆ. ಏಕೆ? **ಅಥವಾ**

'ಭಾರತವು ಸಾರ್ವತ್ರಿಕ ಮಾನವ ಹಕ್ಕುಗಳನ್ನು ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿದೆ.' ಈ ಹೇಳಿಕೆಯನ್ನು ಸಮರ್ಥಿಸಿ.

**20.**ಅಸ್ಪೃಶ್ಯತಾ ಆಚರಣೆಯಂತಹ ಸಾಮಾಜಿಕ ಪಿಡುಗನ್ನು ನಿವಾರಿಸಲು ನಿಮ್ಮ ಸಲಹೆಗಳೇನು? **ಅಥವಾ**

ದೊಂಬಿಯು ಜನಮಂದೆಗಿಂತ ಭಿನ್ನವಾಗಿದೆ. ಹೇಗೆ?

**21.**ವಿಶ್ವ ಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15, 1962 ಒಂದು ಮಹತ್ವವಾದ ದಿನವಾಗಿದೆ. ಏಕೆ?

**22.**ಮೊದಲನೇ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣಗಳೇನು?

**23.**ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳೇನು?

**24.**ಪಶ್ಚಿಮ ಘಟ್ಟಗಳು ಮತ್ತು ಪೂರ್ವ ಘಟ್ಟಗಳಿಗಿರುವ ವ್ಯತ್ಯಾಸಗಳೇನು?

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ.** **9X3=27**

**25.**'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು.' ಹೇಗೆ? ವಿವರಿಸಿ.

**ಅಥವಾ**

ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಬ್ರಿಟಿಷರು ಭಾರತದಲ್ಲಿ ರೂಪಿಸಿದ ನ್ಯಾಯಾಂಗ ಮತ್ತು ಪೋಲಿಸ್ ವ್ಯವಸ್ಥೆಗಳಲ್ಲಿ ಸುಧಾರಣೆಗಳನ್ನು ವಿವರಿಸಿ.

**26.**ಅರಣ್ಯ ಸಂರಕ್ಷಣಾ ಕ್ರಮಗಳಾವುವು?

**27.**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವನ್ನು ವಿವರಿಸಿ.

**28.**ಸಂಘಟಿತ ಕೆಲಸಗಾರರು ಮತ್ತು ಅಸಂಘಟಿತ ಕೆಲಸಗಾರರ ನಡುವಿನ ಭಿನ್ನತೆಗಳೇನು?.

**29.** ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ವಿವರಿಸಿ. **ಅಥವಾ**

ಸಾರ್ವಜನಿಕ ಹಣಕಾಸಿನ ಮಹತ್ವವನ್ನು ತಿಳಿಸಿ.

**30.**ಕೈಗಾರಿಕೆಗಳು ಅತ್ಯಂತ ಅನುಕೂಲಕರವಾದ ಸ್ಥಾನಗಳಲ್ಲಿ ಸ್ಥಾಪನೆಗೊಂಡಿರುತ್ತವೆ. ಏಕೆ? **ಅಥವಾ**

ಭೂಕಂಪದಿಂದಾಗುವ ಪರಿಣಾಮಗಳೇನು?

**31.**ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯರಿಗೆ ಸೋಲಾಗಲು ಕಾರಣಗಳೇನು?

**32.** ಬ್ಯಾಂಕಿನಲ್ಲಿ ಖಾತೆ ತೆರೆಯುವುದರಿಂದಾಗುವ ಪ್ರಯೋಜನಗಳೇನು? **ಅಥವಾ**

ಉದ್ಯಮಗಾರಿಕೆಯ ಗುಣಲಕ್ಷಣಗಳನ್ನು ತಿಳಿಸಿ.

**33.**ವಿಶ್ವಸಂಸ್ಥೆಯ ಧ್ಯೇಯೋದ್ದೇಶಗಳೇನು?

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **4X4=16**

**34.**'ಕಿತ್ತೂರಿನ ಚೆನ್ನಮ್ಮರೊಂದಿಗೆ ಸಂಗೊಳ್ಳಿ ರಾಯಣ್ಣನ ಹೆಸರು ಅಜರಾಮರ ಮತ್ತು ಆದರ್ಶಪ್ರಾಯವೆನಿಸಿದೆ.' ವಿಶ್ಲೇಷಿಸಿ.

**ಅಥವಾ**

ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ.

**35.**ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಕೈಗೊಂಡಿರುವ ಕ್ರಮಗಳೇನು?

**36.**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ವರ್ಗಗಳ ಬಂಡಾಯವನ್ನು ವಿವರಿಸಿ.

**37.**ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ವ್ಯವಸಾಯದ ಪ್ರಾಮುಖ್ಯತೆಯನ್ನು ವಿವರಿಸಿ.

**VI. 38 ಭಾರತದ ನಕ್ಷೆಯನ್ನು ಬರೆದು ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.** **1+4=5**

ಎ) ಕರ್ಕಾಟಕ ಸಂಕ್ರಾಂತಿ ವೃತ್ತ ಬಿ) ಭಾರತದ ಉದ್ದವಾದ ಅಣೆಕಟ್ಟೆ ಸಿ) ಬಾಂಬೆ ಹೈ ಡಿ) ಚೆನ್ನೈ

**ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ. ( ಪ್ರಶ್ನೆ ಸಂಖ್ಯೆ 38ರ ಬದಲಿಗೆ)**

ಹಿಮಾಲಯದ ಪ್ರಾಮುಖ್ಯತೆಯನ್ನು ವಿವರಿಸಿ.